**Code No. 08 X(C)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016 ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಎ.ಪಿ.ಜೆ. ಅಬ್ದುಲ್ ಕಲಾಂರವರ ಪೂರ್ಣ ಹೆಸರು ಅವುಲ್ ಫಕೀರ್ ಜನಲಬ್ದೀನ್ ಅಬ್ದುಲ್ ಕಲಾಂ. ಕಲಾಂ ಹುಟ್ಟಿದು ತಮಿಳುನಾಡಿನ ರಾಮೇಶ್ವರಂನಲ್ಲಿ 1931ರ ಅಕ್ಟೋಬರ್ 15 ರಂದು. ತಂದೆ ಜನಲಬ್ದೀನ್, ತಾಯಿ ಆಶಿಯಮ್ಮ ಮನೆ ಕೆಲಸದಲ್ಲಿ ನಿರತರಾಗಿದ್ದರು. ಮನೆಯಲ್ಲಿ ಬಡತನವಿದ್ದರೂ, ಊಟ ಬಟ್ಟೆಗೆ ಕೊರತೆಯಿರಲಿಲ್ಲ. ತಂದೆ ಸಾಕ್ಷರರಲ್ಲದಿದ್ದರೂ ಮಕ್ಕಳು ಶಿಕ್ಷಿತರು ಆಗಲೇ ಬೇಕೆಂಬ ಆಶಯ ಅವರಲ್ಲಿತ್ತು. ಇವರ ಮನೆಯ ಅಕ್ಕಪಕ್ಕದಲ್ಲಿ ಮುಸಲ್ಮಾನರೇ ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಹಿಂದೂ ಕುಟುಂಬಗಳು ವಾಸವಾಗಿದ್ದವು ಮತ್ತು ಎಲ್ಲರೂ ಸೌಹಾರ್ದದಿಂದ ಬಾಳುತ್ತಿದ್ದರು. ಮನೆಯ ಸಮೀಪದಲ್ಲೇ ಮಸೀದಿ ಇತ್ತು, ಸ್ವಲ್ಪ ದೂರದಲ್ಲೇ ಶಿವ ದೇವಾಲಯವಿತ್ತು. ಹೀಗಾಗಿ ಬಾಲ್ಯದಲ್ಲೇ ಎರಡು ಧರ್ಮಗಳ ಪರಿಚವಾಯಿತು. ಬಾಲಕ ಕಾಲಾಂರವರಿಗೆ ಅವರ ತಂದೆ ಪ್ರಾರ್ಥನೆಯು ಜಾತಿ, ಮತ, ಪಂಥವನ್ನು ಮೀರಿ ಭಾವೈಕ್ಯತೆ ಸಾಧಿಸಲು ಉತ್ತಮ ಸಾಧನವೆಂದು ವಿಮರ್ಶಿಸಿ, ವಿವರಿಸಿ ಬೆಳೆಸಿದರು.

ಅಬ್ದುಲ್ ಕಲಾಂರವರು ಪ್ರಾಥಮಿಕ ಶಿಕ್ಷಣವನ್ನು ರಾಮೇಶ್ವರಂನ ಎಲಿಮೆಂಟರಿ ಶಾಲೆಯಲ್ಲಿ ಮುಗಿಸಿದರು. ಈ ಶಾಲೆಯಲ್ಲಿ ಓದುತ್ತಿದ್ದಾಗ ಅರ್ಚಕನ ಮಗ ರಾಮನಾಥ ಶಾಸ್ತ್ರಿಯ ಜೊತೆ ಮುಂದಿನ ಬೆಂಚಲ್ಲಿ ಕೂರುತ್ತಿದ್ದರು. ಇದನ್ನು ಕಂಡ ಶಿಕ್ಷಕನೊಬ್ಬ ಸಹಿಸಿಕೊಳ್ಳಲಿಲ್ಲ. ಇವರನ್ನು ಹಿಂದಿನ ಬೆಂಚಲ್ಲಿ ಕೂರುವಂತೆ ಸೂಚಿಸಿದ. ಇದರಿಂದ ಇಬ್ಬರಿಗೂ ಬೇಸರವಾಯಿತು. ಈ ಘಟನೆಯನ್ನು ಇಬ್ಬರೂ ತಮ್ಮ ತಂದೆ, ತಾಯಿಗೆ ತಿಳಿಸಿದರು. ರಾಮನಾಥ ಶಾಸ್ತ್ರಿಯ ತಂದೆ ಆ ಶಿಕ್ಷಕನ್ನು ಕರೆಸಿ ಇನ್ನು ಮುಂದೆ ಇಂತಹ ತಾರತಮ್ಯ ಮಾಡದೆ, ಭಾವೈಕ್ಯತೆಯಿಂದಿರಲು ಸೂಚಿಸಿದರು. ಈ ಘಟನೆಯ ನಂತರ ಶಾಲೆಯಲ್ಲಿ ಕಲಾಂ ಹಾಗೂ ಇತರರು ಯಾವುದೇ ತಾರತಮ್ಯ,

[ Turn over

ಧರ್ಮಾಂಧತೆಯಿಂದ ದೂರವಿದ್ದು, ಪರಸ್ಪರ ಸ್ನೇಹದಿಂದಿದ್ದರು. ಈ ಎಲ್ಲಕ್ಕೂ ತಂದೆ ತಾಯಿಗಳ ಸ್ವಭಾವಗಳು ಪ್ರಮುಖವಾಗಿದ್ದವು. ಇವರನ್ನು ಕಂಡರೆ ಅವರ ವಿಜ್ಞಾನ ಶಿಕ್ಷಕರಾದ ಶಿವಸುಬ್ರಹ್ಮಣ್ಯ ಅಯ್ಯರ್‌ರವರಿಗೆ ಎಲ್ಲಿಲ್ಲದ ಪ್ರೀತಿ. ಅವರು ಜಾತಿಯ ವಿರುದ್ಧ ಜಾಗೃತಗೊಳಿಸುವ ಮನಸ್ಸುಳ್ಳವರಾಗಿದ್ದರು. ಕಲಾಂ ಅತ್ಯಂತ ಸುಶಿಕ್ಷಿತನಾಗಿ ಬೆಳೆಯುವಂತೆ ಸ್ಫೂರ್ತಿ ತುಂಬಿದರು. 1970ರ ಆಗಸ್ಟ್ 10ರಂದು ಮುಂಜಾನೆ ಶ್ರೀಹರಿಕೋಟದಿಂದ ನಿರೀಕ್ಷಿತ ರಾಷ್ಟ್ರಾಭಿಮಾನದ ಸಂಕೇತವಾಗಿ ಎಸ್.ಎಲ್.ವಿ.–3ನ್ನು ಉಡಾವಣೆಗೊಳಿಸಿದರು. ಕ್ಷಿಪಣಿ ಯಶಸ್ವಿಯಾಗಿ ಉಡಾವಣೆಯಾದರೂ ರಾಕೆಟ್‌ನ ಎರಡನೇ ಹಂತದ ದೋಷದಿಂದ ಛಿದ್ರಗೊಂಡ ಅದರ ಅವಶೇಷಗಳು ಸನಿಹದ ಸಮುದ್ರದಲ್ಲಿ ಬೀಳಲಾರಂಬಿಸಿದವು. ಈ ವೈಫಲ್ಯದಿಂದ ಕಲಾಂ ದೈಹಿಕವಾಗಿ, ಮಾನಸಿಕವಾಗಿ ಕೃಶರಾದರು. ಕಲಾಂರವರು ವೈಫಲ್ಯದ ಕಾರಣಗಳನ್ನು ಸರಿಪಡಿಸಿ ಎಸ್.ಎಲ್.ವಿ.–3ನ್ನು 1980ರ ಜುಲೈ 18ರಂದು ಯಶಸ್ವಿಯಾಗಿ ಉಡಾವಣೆಗೊಳಿಸಿದರು. ರೋಹಿಣಿ ಕಕ್ಷೆಗೆ ಸೇರಿತು. ಇಡೀ ರಾಷ್ಟ್ರವೇ ಹೆಮ್ಮೆಯಿಂದ ಸಂತಸಪಟ್ಟಿತು. ಕಲಾಂ ಮತ್ತು ತಂಡಕ್ಕೆ ದೇಶಾದ್ಯಂತ ಮೆಚ್ಚುಗೆ ವ್ಯಕ್ತವಾಯಿತು. ಇಂತಹ ಸಾಧನೆ ಮಾಡಿದ ಕೆಲವೇ ರಾಷ್ಟ್ರಗಳಲ್ಲಿ ಭಾರತವೂ ಒಂದಾಗುವಂತೆ ಕಲಾಂ ಮತ್ತು ತಂಡ ಸಾಧನೆಗೈದಿತ್ತು. ಈ ಸಾಧನೆಯಿಂದ ಕಲಾಂ ಏರೋಸ್ಪೇಸ್ ಡೈನಾಮಿಕ್ಸ್ ಅಂಡ್ ಡಿಸೈನ್ ಗ್ರೂಪ್‌ನ ನಿರ್ದೇಶಕರಾಗಿ ಆಯ್ಕೆಯಾದರು. 1990 ರ ಗಣರಾಜ್ಯೋತ್ಸವದಲ್ಲಿ ಕ್ಷಿಪಣಿಗಳನ್ನು ಸಂಭ್ರಮದಿಂದ ಪ್ರದರ್ಶಿಸಲಾಯಿತು. ಇದರ ದ್ಯೋತಕವಾಗಿ ಇವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಾಜಪೇಯಿ ನೇತೃತ್ವದ ರಾಷ್ಟ್ರೀಯ ಪ್ರಜಾತಾಂತ್ರಿಕ ಒಕ್ಕೂಟವು ಕಲಾಂರನ್ನು ತನ್ನ ಪರವಾಗಿ ರಾಷ್ಟ್ರಪತಿ ಅಭ್ಯರ್ಥಿಯಾಗಿ ಘೋಷಿಸಿತು. ಉಳಿದ ಕೆಲ ಪ್ರಮುಖ ಪಕ್ಷಗಳು ಇವರ ಸಾಧನೆ ಬಲ್ಲವರಾದ್ದರಿಂದ ಬೆಂಬಲ ಸೂಚಿಸಿದವು. 2002ರ ಜುಲೈ 15ರಂದು ಅಧಿಕೃತವಾಗಿ ರಾಷ್ಟ್ರಪತಿಯಾಗಿ ಆಯ್ಕೆಯಾಗಿ, ಜುಲೈ 25ರಂದು ಪ್ರಮಾಣವಚನ ಸ್ವೀಕರಿಸಿದರು. ರಾಷ್ಟ್ರಪತಿಗಳಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ನಂತರ ಅತಿ ಬುದ್ಧಿಜೀವಿ ರಾಷ್ಟ್ರಪತಿಯೆನಿಸಿದರು. ಇವರ ಸರಳತೆ, ಪ್ರಾಮಾಣಿಕತೆ, ಪಾರದರ್ಶಕ ಮನೋಭಾವ ದೇಶದ ಎಲ್ಲರ ಮನಸೆಳೆಯುವ ಅಂಶವಾಗಿದೆ. ಕಲಾಂ ದೇಶದ ಆಸ್ತಿಯಾದರು. ದೇಶದ ಪರವಾಗಿ ಕಲಾಂಜಿ ತಮಗೆ ನಮ್ಮ ನಮನ.